**ದಿನಾಂಕ ಃ 11.01.2024**
**(ಸಾಕ್ಷಿಗೆ ಪ್ರಮಾಣವಚನ ಮಾಡಿಸಲಾಯಿತು.)**
**ಆರ್ ಡಬ್ಲ್ಯೂ - 1**

**ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ವಕೀಲರಿಂದ ಃ**

ಈ ಪ್ರಕರಣದಲ್ಲಿ ನಾನು 3ನೇ ಎದುರುದಾರಳನಾಗಿದ್ದು, ನನ್ನ ಮುಖ್ಯವಿಚಾರಣೆಯ ಭಾಗವಾಗಿ ನನ್ನ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿನ ಅಂಶಗಳು ಸತ್ಯವಾಗಿರುತ್ತವೆ.

ಈ ದಿನ ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

1. ಎಕ್ಸಿಕ್ಯೂಷನ್ ನಂ. 17/15 ರಲ್ಲಿಯ ಆಡರ್ ಶೀಟ್ ನ ಧೃಢೀಕೃತ ನಕಲು.
2. ಎಕ್ಸಿಕ್ಯೂಷನ್ ನಂ. 17/15 ರಲ್ಲಿಯ ಅರ್ಜಿಯ ದೃಢೀಕೃತ ನಕಲು.

ಅವುಗಳನ್ನು ಆರ್.ಪಿ-1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು- ಮೇಲ್ಮನವಿದಾರರ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ )
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕ ಃ 04.04.2025**
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**

**ಪಾಟೀ ಸವಾಲುಃ ಮೇಲ್ಮನವಿದಾರರ ಪರ ಶ್ರೀ.ಹೆಚ್.ಸಿ.ಆರ್., ವಕೀಲರಿಂದಃ**

ನಾನು ಇಲ್ಲಿ ಸಲ್ಲಿಸಿರುವ ಪ್ರಮಾಣ ಪತ್ರವನ್ನು ನನ್ನ ಪರವಾಗಿ, ನನ್ನ ಅಣ್ಣ ಹೇಮಂತ್ ಪರವಾಗಿ ಮತ್ತು ನನ್ನ ತಂದೆಯ 2ನೇ ಹೆಂಡತಿ ಪುಷ್ಪ ರವರ ಪರವಾಗಿ ಹಾಕಿದ್ದೇನೆ. ಮಾಗಡಿ ನ್ಯಾಯಾಲಯದಲ್ಲಿ ಆಗಿರುವ ತೀರ್ಪಿನ ವಿರುದ್ಧ ಈ ಅಪೀಲನ್ನು ಮೇಲ್ಮನವಿದಾರರು ಸಲ್ಲಿಸಿದ್ದಾರೆ.

2. ನಾನು, ನನ್ನ ತಂದೆ ಮತ್ತು ನನ್ನ ಅಣ್ಣ ಎಲ್ಲರೂ ಸೇರಿ ಮೇಲ್ಮನವಿದಾರರಿಗೆ ಒಂದು ಕ್ರಯದ ಕರಾರನ್ನು ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಮಾಗಡಿ ನ್ಯಾಯಾಲಯದ ದಾವೆಯಲ್ಲಿ ನಾನು ಹಾಜರಾಗಿಲ್ಲ, ಅದನ್ನು ನನ್ನ ತಂದೆ ನೋಡಿಕೊಳ್ಳುತ್ತಿದ್ದರು. ಆ ದಾವೆಯಲ್ಲಿ ನನ್ನ ತಂದೆ ತಕರಾರನ್ನು ಹಾಕಿದ್ದರೋ, ಇಲ್ಲವೋ ನನಗೆ ಗೊತ್ತಿಲ್ಲ. ಅಸಲು ದಾವೆಯ ತೀರ್ಪಿನಲ್ಲಿ ನಾವು ಸಾಲವನ್ನು ವಾಪಸ್ಸು ಕೊಡಬೇಕು ಎಂದು ಆದೇಶವಾಗಿದೆ.

3. ಅಪೀಲುದಾರರು ಯಾರು ಎಂದು ನನಗೆ ಗೊತ್ತಿದೆ, ಆದರೆ ಅವರೊಂದಿಗೆ ನಾನು ಸಂಪರ್ಕದಲ್ಲಿ ಇರಲಿಲ್ಲ, ನನ್ನ ತಂದೆ ಸಂಪರ್ಕದಲ್ಲಿ ಇದ್ದರು. ನನ್ನ ತಂದೆ ತೀರಿಕೊಂಡ ನಂತರ ಅಪೀಲುದಾರರು ನನ್ನ ಬಳಿ 2 ಬಾರಿ ಮಾತನಾಡಿದ್ದಾರೆ. ನನ್ನ ತಂದೆ ತೀರಿಕೊಂಡ ನಂತರ ಅಪೀಲುದಾರರ ಪರಿಚಯ ನನಗೆ ವೈಯಕ್ತಿಕವಾಗಿ ಇಲ್ಲ. 2014 ರಲ್ಲಿ ಅಪೀಲುದಾರರ ಸೊಂಟಕ್ಕೆ ಏಟಾಗಿ ಅವರು ನೆಲಮಂಗಲ ಸರ್ಕಾರಿ ಆಸ್ಪತ್ರೆಯಲ್ಲಿ ಸುಮಾರು 1 ವರೆ ತಿಂಗಳುಗಳ ಕಾಲ ಚಿಕಿತ್ಸೆ ಪಡೆದಿರುವ ಬಗ್ಗೆ ನನಗೆ ಗೊತ್ತು ಎಂದರೆ ಸರಿಯಲ್ಲ. 2014 ನೇ ಇಸವಿಯಲ್ಲಿ ಅಪೀಲುದಾರರ ಬಲಗಾಲಿಗೆ ಏಟು ಆಗಿ ಅವರು ಚಿಕಿತ್ಸೆ ಪಡೆದಿರುವುದು ನನಗೆ ಗೊತ್ತು ಎಂದರೆ ಸರಿಯಲ್ಲ. 2016ನೇ ಇಸವಿಯವರೆಗೂ ಅಪೀಲುದಾರರು ಚಿಕಿತ್ಸೆ ಪಡೆಯುತ್ತಿದ್ದರು ಎನ್ನುವ ವಿಷಯ ನನಗೆ ಗೊತ್ತು ಎಂದರೆ ಸರಿಯಲ್ಲ.

4. ಅಪೀಲುದಾರರು ಇಲ್ಲಿ ಸಲ್ಲಿಸಿರುವ ಮೆಡಿಕಲ್ ದಾಖಲೆಗಳನ್ನು ನಾನು ನೋಡಿಲ್ಲ. ಅಪೀಲುದಾರರು ನೆಲಮಂಗಲದಲ್ಲಿ ವಾಸವಿದ್ದಾರೆ ಎಂದರೆ ಸರಿ. ನಾನು ಮದ್ದೂರು ತಾಲ್ಲೂಕಿನ ಬೆಸಗರಹಳ್ಳಿಯಲ್ಲಿ ವಾಸವಿದ್ದೇನೆ. 2014 ರಿಂದ 2018 ರವರೆಗೆ ಅಪೀಲುದಾರರ ಆರೋಗ್ಯ ಹದಗೆಟ್ಟಿದ್ದರಿಂದ ಅವರು ಚಿಕಿತ್ಸೆ ಮತ್ತು ವಿಶ್ರಾಂತಿ ಪಡೆಯುತ್ತಿದ್ದರು ಮತ್ತು ಆ ಬಗ್ಗೆ ಇಲ್ಲಿ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದರೆ ಸರಿಯಲ್ಲ. ಅಪೀಲುದಾರರು ಹಾಜರುಪಡಿಸಿರುವ ದಾಖಲೆಗಳು ಸುಳ್ಳು ಎನ್ನುವುದಕ್ಕೆ ನಾನು ಇಲ್ಲಿ ದಾಖಲೆಯನ್ನು ಹಾಜರುಪಡಿಸಿಲ್ಲ. ಅಪೀಲುದಾರರಿಗೆ ಕೆಲ ನ್ಯಾಯಾಲಯದ ತೀರ್ಪಿನ ಬಗ್ಗೆ ಮೊದಲ ಬಾರಿಗೆ ಗೊತ್ತಾಗಿದ್ದು, 2018ನೇ ಇಸವಿಯಲ್ಲಿ ಎಂದರೆ ಸರಿಯಲ್ಲ.

5. ಜಾರಿ ಅರ್ಜಿಯ ಬಗ್ಗೆ ವಿಷಯವು ಅಪೀಲುದಾರರಿಗೆ ಗೊತ್ತಿರಲಿಲ್ಲ ಕಾರಣ ಅವರು ಆಗ ಆಸ್ಪತ್ರೆಯಲ್ಲಿ ದಾಖಲಾಗಿದ್ದರು ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಗೊತ್ತಿದೆ. ಅಪೀಲುದಾರರಿಗೆ ಕೆಲ ನ್ಯಾಯಾಲಯದ ತೀರ್ಪು ಗಮನಕ್ಕೆ ಬಂದ ನಂತರ ತಕ್ಷಣವೇ ಈ ಅಪೀಲನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. 2014 ರಿಂದ 2022 ರವರೆಗೆ ನನಗೆ ಅಪೀಲುದಾರರ ಸ್ಥಿತಿಗತಿಯ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. 2022ರಲ್ಲಿ ನನಗೆ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳು ಗೊತ್ತಾಯಿತು.

6. 2021ರಲ್ಲಿ ನನ್ನ ತಂದೆ ತೀರಿಕೊಂಡಿದ್ದಾರೆ. ಅಸಲು ದಾವೆಯ ಬಗ್ಗೆ ನನ್ನ ತಂದೆ ನನಗೆ ಎಲ್ಲಾ ವಿಚಾರವನ್ನು ಹೇಳಿದ್ದರು. ಕೇಸಿನ ಬಗ್ಗೆ ನನ್ನ ತಂದೆ ಆಗಾಗ್ಗೆ ಹೇಳುತ್ತಿದ್ದರು. ಮಾಗಡಿ ನ್ಯಾಯಾಲಯದಲ್ಲಿ ಕೇಸು 2022 ನೇ ಇಸವಿಯಲ್ಲಿ ಮುಗಿದಿದೆ ಎಂದು ನನಗೆ ಗೊತ್ತಾಯಿತು. ಆ ವಿಷಯವನ್ನು ನಾನು ವಿಚಾರಣೆ ಮಾಡಿ ತಿಳಿದುಕೊಂಡಿದ್ದೇನೆ. ನಾನು ಈಗ ಒಂದು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ಈ ಅಪೀಲಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಮಾಹಿತಿಯನ್ನು ಇಲ್ಲಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಅಪೀಲುದಾರರು ನನ್ನ ಬಳಿ

ಮಾತನಾಡಿದಾಗ ಅವರ ಆರೋಗ್ಯದ ವಿಚಾರವನ್ನು ಹೇಳಿಕೊಂಡರು ಎಂದರೆ ಸರಿಯಲ್ಲ. ಜಾರಿ ಅರ್ಜಿಯ ಬಗ್ಗೆ ವೈಯಕ್ತಿಕವಾಗಿ ಅಪೀಲುದಾರರಿಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

**ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ಬಿ.ವಿ. ರೇಣುಕ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**